## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.689-2013** **ಡಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಶಿವಣ್ಣನಾಯಕ @ ಶಿವಣ್ಣ<br>ಹಯ್ಯರಹಳ್ಳಿ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 25-04-2025.** |

**<u>ಪಾಟೀ ಸವಾಲುಃ ವಾದಿಗಳ ಪರ ಶ್ರೀ ಕೆ.ಎಸ್.ಕೆ ವಕೀಲರಿಂದಃ</u>**

ದೇವನಾಯಕ ಎಂದರೆ ನನ್ನ ಚಿಕ್ಕಪ್ಪ. ಮಾದನಾಯಕ ನನ್ನ ತಂದೆ. ದಾವಾ 1 ನೇ ಐಟಂ ಸ್ವತ್ತನ್ನು ನನ್ನ ತಂದೆಯವರು ದಿ.14-12-1970 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಆದೇ ರೀತಿ ದಿ.22-03-1971 ರಲ್ಲಿ ಸರ್ವೇ ನಂ.1036 ರಲ್ಲಿ 1 ಎಕರೆ 20 ಗುಂಟೆ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಆ ರೀತಿ ಮಾರಾಟ ಮಾಡಿದ ದಿನದಿಂದಲೂ ವಾದಿಯವರು ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದು ವ್ಯವಸಾಯವನ್ನು ಮಾಡುತ್ತಿರುತ್ತಾರೆ ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತುಗಳ ಪೂರ್ವಕ್ಕೆ ಸರ್ಕಾರಿ ಬಂಜರು ಜಮೀನು ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಜಮೀನನ್ನು ನಾವು ವ್ಯವಸಾಯ ಮಾಡುತ್ತಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ತಂದೆಯವರು ವಾದಿಗೆ ಮಾರಾಟ ಮಾಡಿದ ಸ್ವತ್ತಿನ ಅಕ್ಕ-ಪಕ್ಕದಲ್ಲಿ ನಮಗೆ ಸೇರಿದ ಯಾವುದೇ ಜಮೀನು ಇರುವುದಿಲ್ಲ

ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತುಗಳ ಬಾಜುವಿನಲ್ಲಿ ಇರುವ ಸ್ವತ್ತನ್ನು ಸರ್ಕಾರದವರು ನಮಗೆ ಮಂಜೂರು ಮಾಡಿದ್ದು, ಆ ಸಂಬಂಧ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಹೇಳುವಂತೆ ದಾವಾ ಷೆಡ್ಯೂಲ್ ಸ್ವತ್ತುಗಳ ಅಕ್ಕ–ಪಕ್ಕದಲ್ಲಿ ನನಗೆ ಯಾವುದೇ ಜಮೀನು ಮಂಜೂರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಮಾರಾಟವಾಗಿರುವ ಸ್ವತ್ತಿಗೂ ನಮಗೂ ಯಾವುದಲೇ ಸಂಬಂಧ ಇರುವುದಿಲ್ಲ ಎಂದರೆ ಸರಿ. ನಾವು ವಾದಿಗೆ ಮಾರಾಟ ಮಾಡಿರುವ ಸ್ವತ್ತುಗಳು ನಮಗೆ ಬರಬೇಕು ಎಂದು 2013 ರಿಂದಲೂ ನಾವು ತಕರಾರು ಮಾಡುತ್ತಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಸರ್ಕಾರದಿಂದ ನಮಗೆ ಯಾವುದೇ ಜಮೀನು ಮಂಜೂರು ಆಗದೇ ಇದ್ದರೂ ಸಹ, ವಾದಿಯವರ ಸ್ವಾಧೀನದಲ್ಲಿ ಇರುವ ಜಮೀನಿಗೆ ನಾನು ಮತ್ತು ನಮ್ಮ ಕುಟುಂಬದವರು ಅತಿಕ್ರಮ ಪ್ರವೇಶ ಮಾಡಿ ಅದರಲ್ಲಿ ಬೆಳೆದಿರುವ ಸ್ವತ್ತಿಗೆ ತೊಂದರೆ ನೀಡುತ್ತಿರುತ್ತೇವೆ ಎಂದರೆ ಸರಯಲ್ಲ ನಾವು ವಾದಿಯವರ ಜಮೀನುಗಳ ಆಜು–ಬಾಜುವಿನಲ್ಲಿ ಯಾವುದೇ ವ್ಯವಸಾಯ ಮಾಡುತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಾವು ವಾದಿಗೆ ಸೇರಿದ ಜಮೀನನ್ನು ಒತ್ತುವರಿ ಮಾಡಿಕೊಳ್ಳುವ ಉದ್ದೇಶದಿಂದ ಸರ್ಕಾರಿ ಜಮೀನನ್ನು ಉಳುಮೆ ಮಾಡುತ್ತಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ದಾವಾ ಷೆಡ್ಯೂಲ್ ಸ್ವತ್ತುಗಳ ಆಜು–ಬಾಜುವಿನಲ್ಲಿ ನಮ್ಮ ಹಕ್ಕು ಮತ್ತು ಒಡೆತನಕ್ಕೆ ಸೇರಿದ ಯಾವುದೇ ಸ್ವತ್ತು ಇಲ್ಲದೇ ಇರುವುದರಿಂದ ನಾವು ನಮ್ಮ ಪ್ರತಿವಾದ ಪತ್ರದಲ್ಲಿ ಹೇಳಿರುವಂತೆ 0.15 ಗುಂಟೆ ಸ್ವತ್ತನ್ನು ಒತ್ತುವರಿ ಮಾಡಿಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತುಗಳ ಆಜು–ಬಾಜುವಿನಲ್ಲಿ ನಮಗೆ ಸೇರಿದ ಯಾವುದೇಲ ಸ್ವತ್ತು ಇಲ್ಲದೇ ಇರುವುದರಿಂದ ವಾದಿಯು ಮರಗಳನ್ನು ಕಟಾವು ಮಾಡಬಾರದು ಎಂದು ಹೇಳುವ ಯಾವುದೇ ಹಕ್ಕು ನಮಗೆ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತುಗಳ ಅಕ್ಕ–ಪಕ್ಕದಲ್ಲಿ ಇರುವ ಸರ್ಕಾರಿ ಖರಾಬು ಸ್ವತ್ತಿಗೆ ಸಂಬಂಧಿಸಿದಂತೆ ನಮಗೆ ಯಾವುದೇ ಹಕ್ಕು ಮತ್ತು ದಾಖಲಾತಿಗಳು ಇಲ್ಲದೇ ಇದ್ದರೂ ಸರ್ಕಾರಿ ಜಮೀನನ್ನು ಕಬಳಿಸಬೇಕೆಂಬ ಉದ್ದೇಶದಿಂದ ಸದರಿ ಸ್ವತ್ತಿನ ಆಜು–ಬಾಜುದಾರರಿಗೆ ತೊಂದರೆ ನೀಡುತ್ತಿರುತ್ತೇವೆ ಎಂದರೆ ಸರಿಯಲ್ಲ. ನಾವುಗಳು ಸ್ವತ್ತುಗಳನ್ನು ಸರ್ವೇ ಮಾಡಿಸಲೂ ಸಹ ತೊಂದರೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ನಾವು ವಾದಿಗೆ ತೊಂದರೆ ನೀಡಿದ ಸಂಬಂಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ತಂದೆಯವರು ವಾದಿಯವರಿಗೆ ಮಾರಾಟ ಮಾಡಿದ ಸ್ವತ್ತುಗಳ ಸಂಬಂಧ ನಾವುಗಳು ನಿರಂತರವಾಗಿ ಅತಿಕ್ರಮ ಪ್ರವೇಶ ಮಾಡಿದ್ದರಿಂದ ವಾದಿಗಳು ನಮ್ಮಗಳ ವಿರುದ್ಧ ಈ ದಾವಾವನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾವು

ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳು ಸೃಷ್ಟಿತ ದಾಖಲಾತಿಗಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**